ಓ ಎಸ್ ನಂ.109/2023

ಪಿ.ಡಬ್ಲ್ಯೂ-1 ಅಪ್ಪಾಜಿ ತಂದೆ ಚಿದಾನಂದ ಹಿರೆಮಠ

**(ಇಂದು ದಿನಾಂಕಃ 08-07-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.)**

ಪಾಟೀ ಸವಾಲುಃ ಶ್ರೀಮತಿ ಎ ಟಿ ಡಿ ವಕೀಲರಿಂದ.

೧ನೇ ಪ್ರತಿವಾದಿ ನನ್ನ ತಂದೆಯಾಗಿರುತ್ತಾರೆ. ೨ ರಿಂದ ೪ನೇ ಪ್ರತಿವಾದಿಯರು ನನ್ನ ಸಹೋದರಿಯರಾಗಿರುತ್ತಾರೆ. ೫ ರಿಂದ ೮ನೇ ಪ್ರತಿವಾದಿಗಳು ನನ್ನ ಅತ್ತೆಯಂದಿರು ಆಗಿರುತ್ತಾರೆ. ೯ನೇ ಪ್ರತಿವಾದಿ ನನ್ನ ದೊಡ್ಡಪ್ಪನ ಹೆಂಡತಿ ಎಂದರೆ ಸರಿ. ೧೦ ರಿಂದ ೧೩ ನೇ ಪ್ರತಿವಾದಿಗಳು ನಮ್ಮ ದೊಡ್ಡಪ್ಪನ ಮಕ್ಕಳು ಎಂದರೆ ಸರಿ. ಮುರುಗಯ್ಯ ಮತ್ತು ಚೆನ್ನಬಸಯ್ಯರವರು ನನ್ನ ಅಜ್ಜ ಮತ್ತು ಅಜ್ಜಿ ಎಂದರೆ ಸರಿ. ನನ್ನ ದೊಡ್ಡಪ್ಪ ಶಿವಾನಂದ ಮೃತರಾಗಿರುತ್ತಾರೆ ಎಂದರೆ ಸರಿ. ಶಿವಾನಂದರವರಿಗೆ ಮದುವೆ ಆಗಿರಲಿಲ್ಲ ಎಂದರೆ ಸರಿ. ನನ್ನ ಅಜ್ಜಿ ಮೃತರಾಗುವ ಮೊದಲು ಶಿವಾನಂದ ಮೃತರಾಗಿರುತ್ತಾರೆ ಎಂದರೆ ಸರಿ. ನನ್ನ ಅಜ್ಜಿ ಮೃತರಾಗುವ ಮೊದಲೇ ನನ್ನ ಅಜ್ಜ ಕೂಡಾ ಮೃತರಾಗಿರುತ್ತಾರೆ ಎಂದರೆ ಸರಿ.

೨. ದಾವಾ ಜಮೀನುಗಳು ನಮ್ಮ ಮನೆತನಕ್ಕೆ ಸಂಬಂಧಪಟ್ಟವುಗಳು ಎಂದರೆ ಸರಿ. ಸರ್ವೆನಂಬರ ೫೪ ಮತ್ತು ೫೫ ಈ ದಾವೆಯಲ್ಲಿ ನಾನು ಸೇರಿಸಿಲ್ಲ ಎಂದರೆ ಸರಿ. ಸದರಿ ಜಮೀನುಗಳು ನಮ್ಮ ತಂದೆಯ ಹೆಸರಿನಲ್ಲಿ ಇವೆ ಎಂದರೆ ನನಗೆ ಗೊತ್ತಿಲ್ಲ. ಸರ್ವೆ ನಂಬರ ೫೪ ರಲ್ಲಿ ನಮ್ಮ ತಂದೆಯ ಪಾಲಿಗೆ ೪ ಎಕರೆ ೩೧ ಗುಂಟೆ ಜಮೀನು ಬಂದಿದೆ ಎಂದರೆ ಸರಿ. ನಮ್ಮ ತಂದೆಗೆ ಸರ್ವೆನಂಬರ ೫೫ ರಲ್ಲಿ ೩೭ ಗುಂಟೆ ಜಮೀನು ಪಾಲಿಗೆ ಬಂದಿದೆ ಎಂದರೆ ನನಗೆ ಗೊತ್ತಿಲ್ಲ. ನಮ್ಮ ತಂದೆಯ ಪಾಲಿಗೆ ೧೩ ಎಕರೆ ೧೮ ಗುಂಟೆ ಜಮೀನು

ಬಂದಿದೆ ಎಂದರೆ ನನಗೆ ಗೊತ್ತಿಲ್ಲ. ನಮ್ಮ ತಂದೆಯಾದ ೧ನೇ ಪ್ರತಿವಾದಿ ನನ್ನ ಜೊತೆಯೆ ವಾಸವಿರುತ್ತಾರೆ.

೩. ನಮ್ಮ ತಂದೆಯ ಮಾತುಕೇಳಿ ನಾನು ಕೇಸು ಹಾಕಿರುತ್ತೇನೆ ಎಂದರೆ ಸಾಕ್ಷಿಯು ಕೇಸು ಹಾಕುವಾಗ ನಮ್ಮ ತಂದೆ ಇರಲಿಲ್ಲ, ಅವರು ಕುಡಿಯುತ್ತಾರೆ ಮತ್ತು ಎರಡೆರಡು ತಿಂಗಳು ಒಮ್ಮೊಮ್ಮೆ ಮನೆಗೆ ಬರುವುದಿಲ್ಲ ಎನ್ನುತ್ತಾರೆ. ನಮ್ಮ ತಂದೆ ಆ ರೀತಿ ಹೋಗಿ ಮತ್ತೆ ಮನೆಗ ಬರುತ್ತಾರೆ. ನಮ್ಮ ತಂದೆ ಆ ರೀತಿ ಮನೆ ಬಿಟ್ಟು ಹೋಗುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸರ್ವೆ ನಂಬರ ೫೪ ರಲ್ಲಿ ನಮ್ಮ ದೊಡ್ಡಪ್ಪ ಸದಾನಂದರವರ ಪಾಲಿಗೆ ೧೩ ಎಕರೆ ೨೬ ಗುಂಟೆ ಜಮೀನು ಹೋಗಿದೆ ಎಂದರೆ ನನಗೆ ಗೊತ್ತಿಲ್ಲ. ನಮ್ಮ ದೊಡ್ಡಪ್ಪ ಶಿವಾನಂದರವರ ಹೆಸರಿನಲ್ಲಿದ್ದ ಜಮೀನು ನಮ್ಮ ಅಜ್ಜಿಯ ಹೆಸರಿನಲ್ಲಿ ಆಗಿತ್ತು ಎಂದರೆ ನನಗೆ ಗೊತ್ತಿಲ್ಲ. ಸಾಕ್ಷಿಯು ನಮ್ಮ ಅಜ್ಜನಿಂದ ಅಜ್ಜಿಯ ಹೆಸರಿನಲ್ಲಿ ಆಗಿರಬಹುದು ಎನ್ನುತ್ತಾರೆ. ನನ್ನ ತಂದೆ ಮತ್ತು ದೊಡ್ಡಪ್ಪರವರಿಗೆ ಜಮೀನು ಸಮಾನಾಗಿ ಹಂಚಿಕೆ ಆಗಿದೆ ಎಂದರೆ ನನಗೆ ಗೊತ್ತಿಲ್ಲ.

೪. ನನ್ನ ಅಜ್ಜಿ ತನ್ನ ೪ ಜನ ಹೆಣ್ಣುಮಕ್ಕಳಿಗೆ ಮೃತ್ಯುಪತ್ರ ಮಾಡಿಕೊಟ್ಟಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಈಗ ನನಗೆ ತೋರಿಸಿದ ದಾಖಲೆಯಲ್ಲಿ ನಮ್ಮ ಅಜ್ಜಿಯ ಪೋಟೋ ಇರುತ್ತದೆ. ಸಾಕ್ಷಿಯು ಸದರಿ ಪೋಟೋವನ್ನು ನೋಡಿ ಗುರುತಿಸಿದ್ದರಿಂದ ಅದನ್ನು ನಿಡಿ-೧ ಎಂದು ಗುರುತಿಸಲಾಯಿತು. ನನ್ನ ಅಜ್ಜಿ ಸ್ವ-ಇಚ್ಛೆಯಿಂದ ಮೃತ್ಯುಪತ್ರ ಬರೆದುಕೊಟ್ಟಿರುತ್ತಾಳೆ ಎಂದರೆ ಸಾಕ್ಷಿಯು ನನ್ನ ಅಜ್ಜಿಯನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗುತ್ತೇವೆ ಎಂದು ಹೇಳಿ ಅದನ್ನು ಬರೆಸಿಕೊಂಡಿರುತ್ತಾರೆ ಎನ್ನುತ್ತಾರೆ. ೫ ರಿಂದ ೮ನೇ ಪ್ರತಿವಾದಿಗಳು ತಮ್ಮ ಹೆಸರಿನಲ್ಲಿ ದಾವಾ ಜಮೀನುಗಳು ಮಾಡಿಕೊಂಡಿರುತ್ತಾರೆ ಎಂದರೆ ಸರಿ.

೫. ೫ ರಿಂದ ೮ನೇ ಪ್ರತಿವಾದಿಗಳ ಹೆಸರಿನಲ್ಲಿ ತಲಾ ೨ ಎಕರೆ ಜಮೀನು ಹೆಸರಿಗೆ ಆಗಿದೆ ಎಂದರೆ ಸರಿ. ೫ ರಿಂದ ೮ನೇ ಪ್ರತಿವಾದಿಗಳು ಊರಿಗೆ ಬಂದಾಗ ನಾವು ಕಿರಿ-ಕಿರಿ ಮಾಡಿದ್ದರಿಂದ ಅವರು ೧೪ ನೇ ಪ್ರತಿವಾದಿಗೆ ಜಮೀನು ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ. ನಮ್ಮ ತಂದೆ ೫ ರಿಂದ ೮ನೇ ಪ್ರತಿವಾದಿಗಳ ಮೇಲೆ ಓ ಎಸ್ ನಂಬರ 126-2018 ಎಂಬ ದಾವೆ ಹಾಕಿದ್ದರು, ಅದು ವಜಾಗೊಂಡಿದೆ ಎಂದರೆ ನನಗೆ ಗೊತ್ತಿಲ್ಲ. ನನ್ನ ಕಡೆಯಿಂದ ಅದು ವಜಾಗೊಂಡ ಮೇಲೆ ಬೇಕೆಂದು ಕೇಸು ಹಾಕಲಾಗಿದೆ ಎಂದರೆ ಸರಿಯಲ್ಲ. ದಾವಾ ಜಮೀನು ನನ್ನ ಅಜ್ಜಿ ೫ ರಿಂದ ೮ನೇ ಪ್ರತಿವಾದಿಗಳಿಗೆ ಸ್ವ-ಇಚ್ಛೆಯಿಂದ ಬಿಟ್ಟುಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿಯು ನಮ್ಮ ಅಜ್ಜಿ ನನ್ನ ತಂದೆಗೆ ಜಮೀನು ಮಾಡುತ್ತೇನೆ ಎಂದು ಹೇಳಿದ್ದರು ಆದರೆ ಅವರನ್ನು ಆಸ್ಪತ್ರೆಗೆಂದು ಕರೆದುಕೊಂಡು ಹೋಗಿ ದಾಖಲೆ ಮಾಡಿಕೊಂಡಿರುತ್ತಾರೆ ಎನ್ನುತ್ತಾರೆ.

೬. ನಮ್ಮ ದೊಡ್ಡಪ್ಪ ಮತ್ತು ನಾವು ಜಮೀನು ಬೇರೆ-ಬೇರೆ ಸಾಗುವಳಿ ಮಾಡುತ್ತೇವೆ ಎಂದರೆ ಸರಿಯಲ್ಲ. ನಮ್ಮ ಜಮೀನಿನ ಬೆಳೆಯನ್ನು ನಾವು ಮತ್ತು ನಮ್ಮ ದೊಡ್ಡಪ್ಪನ ಜಮೀನಿನ ಬೆಳೆಯನ್ನು ಅವರು ಮಾರಾಟ ಮಾಡುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿಯು ಒಟ್ಟಿಗೆ ಮಾಡುತ್ತೇವೆ ಎನ್ನುತ್ತಾರೆ. ನಮ್ಮ ತಂದೆ ೧೩ ಎಕರೆ ೧೮ ಗುಂಟೆ ಜಮೀನು ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ.

ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದರಿಂದ ಸಮಯಾವಕಾಶ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಅದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ಅಫಜಲಪೂರ.